## ಕುಂಚ ಪ್ರಪಂಚ





**ಅಲೆಕ್ಸಾಂಡರ್ ಜೊಯೆಲ್ ಜೋನ್ಸ್**
4ನೇ ತರಗತಿ, ಸಂತ ಜೋಸೆಫ್ ಅಕ್ಷರಧಾಮ, ಶಿವಮೊಗ್ಗ



**ಶುಭ್ನಿತ್ ಕೆ. ಪಟೇಲ್**
6ನೇ ತರಗತಿ
ಹಾಸನ ಪಬ್ಲಿಕ್ ಶಾಲೆ, ಹಾಸನ






# ಕಾಡಾನೆಗೆ ನೆಗಡಿ

**ಲಲಿತಾ ಕೆ. ಹೊಸಪ್ಯಾಟಿ**
ಕಲೆ: ಸಂತೋಷ್ ಸಸಿಹಿತ್ಲು

ಕಾಡಿನ ಆನೆಗೆ ನೆಗಡಿಯಾಯಿತು
ಓಡಾಡಿತು ಕಾಡಿನ ತುಂಬೆಲ್ಲ
ಕಣ್ಣಲಿ ಉರಿಉರಿ ಗಂಟಲು ಕಿರಿಕಿರಿ
ಉಸಿರಾಡಲು ಆನೆಗೆ ಆಗ್ತಿಲ್ಲ

ಹುಳಿ ಖಾರಾ ಉಪ್ಪು ಸಿಹಿಯು
ರುಚಿಸದು ನಾಲಿಗೆ ಒಂದೀಟು
ಸಂಪಿಗೆ ಮರದ ಸೊಂಪಿನ ಹೂವಲೂ
ಘಾಟು ವಾಸನೆ ಯಾಕೀಟು

ನಿಗೂಢ ನೆಗಡಿಗೆ ಔಷಧಿ ಕೊಡಲು
ಇರುವೆ ನಡೆದು ಬಂದಿತ್ತು
ಸಕ್ಕರೆ ಹರಳಿಗೆ ಮೆಣಸಿನ ಪುಡಿಯ
ಬೆರಸಿ ಬಾಯಿಗೆ ತುರುಕಿತ್ತು

ಸಪ್ಪೆ ಸಪ್ಪೆ ತಿಳಿಯದು ರುಚಿಯು
ಎನ್ನಲು ನೊಣವು ಎದುರಿತ್ತು
ಶುಂಠಿ ಕಷಾಯಕ್ಕೆ ಬೆಲ್ಲ ಬೆರಸಿ
ಬಿಸಿ ಬಿಸಿ ಕೊಡಲು ಗುಯ್ಯಗುಟ್ಟು

ಹಲ್ಲಿಯೊಂದು ಚಪ್ಪರಿಸಿ ಹಾರಿ
ಸೊಳ್ಳೆಯೊಂದ ಕರೆತಂತು
ವೈದ್ಯರು ಬಂದರು ಬಾಯಿ ತೆರೆಯಿರಿ
ಆನೆಗೆ ಸಲಹೆ ನೀಡಿತ್ತು

ಆನೆ ಸೊಂಡಿಲು ಹೊಕ್ಕ ಸೊಳ್ಳೆ
ಕಚಕಚ ಒಳಗೆ ಚುಚ್ಚಿತ್ತು
ಕಚಗುಳಿ ಇಟ್ಟಂತಾಯಿತು ಆನೆಗೆ
ಆಕ್ಷಿ ಆಕ್ಷಿ ಸೀನಿತ್ತು

ಸೀನಿದ ರಭಸಕೆ ಸಿಂಬಳದುಂಡೆ
ಆಚೆ ಜಾರಿ ಬಿದ್ದಿತ್ತು
ಕಟ್ಟಿದ ಮೂಗು ಗಂಟಲು ಹಗುರ
ನೆಗಡಿಯ ತಲೆಬಿಸಿ ಹೋಗಿತ್ತು

ಇರುವೆ ನೊಣ ಹಲ್ಲಿ ಸೊಳ್ಳೆಯ
ಮರೆವಣಿಗೆ ಮಾಡಿತು ಕಾಡಾನೆ
ನೆಗಡಿಯ ಕಳೆದ ಗೆಳೆಯರ ಮುಂದೆ
ತಲೆಯನು ಬಾಗಿತು ಸುಮ್ಮನೆ